ಓ ಎಸ್ 48/2013 ಪಿ.ಡಬ್ಲ್ಯೂ: 1

ಇಂದು ದಿಃ 29/11/2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಜೆ.ಎಸ್. ವಕೀಲರಿಂದಃ

ದಾವೆಯಲ್ಲಿ ಮನೆಯಲ್ಲಿ ಭಾಗ ಬರಬೇಕು ಎಂದು ಕೇಳಿದ್ದೇನೆ ಎಂದರೆ ನಿಜ. ಅದನ್ನು ದಾವೆಯಲ್ಲಿ ಎ ತಪಶೀಲಿನಲ್ಲಿ ಕಾಣಿಸಿದ್ದೇನೆ ಎಂದರೆ ನಿಜ. ಆ ಮನೆಗೆ ಪಂಚಾಯತು ಖಾತೆ ನಂ ಅಥವಾ ಸ್ವತ್ತು ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಇನ್ನೂ ಕೂಡ ಸ್ವಲ್ಪ ಮನೆಯದ್ದು ಕೊಡಬೇಕಾಗಿರುವುದು ಇದೆ. ಮನೆಯ ಅಳತೆಯನ್ನು 47*50 ಅಡಿ ಎಂದು ಕಾಣಿಸಿದ್ದೇನೆ ಎಂದರೆ ನಿಜ. ನಿಪಿ 26 ಡಿಮ್ಯಾಂಡ್ ರಿಜಿಸ್ಟಾರ್ ಎಕ್ಸಟ್ರಾಕ್ಟ್ ನಲ್ಲಿ 29*40 ಅಡಿ ಆಸ್ತಿ ಇದೆ ಎಂದು ನಮೂದು ಇದೆ ಎಂದರೆ 47*50 ಅಡಿ ಅಳತೆಯೇ ಅಸೆಸ್ಮೆಂಟ್ ನಲ್ಲಿ ಇರುವುದು ಎಂದು ನುಡಿಯುತ್ತೇನೆ. ಈ ದಾವೆ ಸಲ್ಲಿಸುವ ಮೊದಲೇ ಈಗ ಸಲ್ಲಿಸಿರುವ ನಿ ಪಿ 26 ನ್ನು ಪಡೆದುಕೊಂಡಿದ್ದೆ ಎಂದರೆ ಅದನ್ನು ಇತ್ತೀಚೆಗೆ ಪಡೆದುಕೊಂಡಿರುವುದು ಎಂದು ನುಡಿಯುತ್ತೇನೆ. ದಾವೆಯಲ್ಲಿ ಕಾಣಿಸಿರುವ ಮನೆಯ ಸರಿಯಾದ ಅಳತೆ ಹಾಗೂ ಸ್ವತ್ತು ಸಂಖ್ಯೆ ಕಾಣಿಸದ ಕಾರಣ ಅದರಲ್ಲಿ ಹಿಸ್ಸೆ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆ ನನ್ನ ತಂದೆಗೆ ಸೇರಿತ್ತು ಎಂದು ತೋರಿಸುವಂತ ದಾಖಲೆ ಹಾಜರು ಪಡಿಸಿಲ್ಲ ವಾದ್ದರಿಂದ ಸದರಿ ದಾವಾ ಐಟ್ಂ 1 ರ ಕುರಿತು ಹಿಸ್ಸೆ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇತರೆ ಪ್ರತಿವಾದಿಗಳು ಗೈರು, ಯಾವುದೇ ಕೋರಿಕೆ ಇಲ್ಲ ಆದ್ದರಿಂದ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.